ಸಂತಸಖು

ಕೋ. ಶ. ಕಾರಂತ, ಬಿ.ಎ., ಬಿ.ಎಲ್.

ಸಂತಸಖ

ಕೋ. ಶ. ಕಾರಂತ, ಬಿ.ಎ., ಬಿ.ಎಲ್.

1934

ತುಳುನಾಡ್ ಛಾಪಖಾನೆ, ಉಡುಪಿ.

2 ಆಣೆ.

ಇದರ ಒಡೆತನ ಕಾದಿದೆ.

ಮುನ್ನುಡಿ

ಭಕ್ತಿಮಾರ್ಗವು ಸುಗಮವಂತೆ. ಆದರೆ ಭಕ್ತಿಯ ರಸವು ನನ್ನಲ್ಲಿಲ್ಲ. ಆ ಭಾಗ್ಯ ನನ್ನಲ್ಲಿಲ್ಲ. ಸಂತರ ಚರಿತ್ರೆಯನ್ನು ಬರೆದಾದರೂ ಭಕ್ತಿಯ ಅ, ಆ ಕಲಿವ ಅತ್ಯಾಸೆ ನನ್ನಲ್ಲಿ.

ಹೊಸಕಾಲಕ್ಕೆ ಹೊಸದಾರಿ ಚಂದವಂತೆ. ಕೆಲವರಿಗೆ ಮುಕ್ತಪ್ರಾಸ (Blank-verse)ದ ಒಲ್ಮೆ. ಆದರೆ ನನ್ನ ದಾರಿ ಬೇರೆ. ನನ್ನದೊಂದು ಹೊಸತಾದ ಹೊಸದಾರಿ.

'ಸ್ವದೇಶಿ ಪ್ರಚಾರಕ'ನು ಇದನ್ನು ಬೆಳಕಿಗೆ ತಂದಿದ್ದನು. ಇದು ಅದರ ಎರಡನೆ ರೂಪ. ಇದಕ್ಕೆ ನೆರವಾದ ನನ್ನವರಿಗೆ ನನ್ನ ವಂದನೆಗಳು.

ಕೋ. ಶ. ಕಾರಂತ.

ಸಂತಸಖು

ದೃಶ್ಯ ೧

(ಸ್ಥಳ – ಕೊಳದ ಬಳಿ – ಸಮಯ – ಬೆಳಿಗ್ಗೆ)

ಮಾಲತಿ—ಅಕ್ಕಾ, ಕಳದವು ದಿನಗಳೆಷ್ಟು ಬೇಗನೆ! ಮಿಂಚಿನ ವೇಗದಲಿ ದಿನವೆಂಟು ಸಾಗಿದವು. ಇಂದಿನ ಇರುಳು ಕಳೆದು ನಾಳೆ ಹೋಗುವುದು ನಿಶ್ಚಯವೆ, ಅಕ್ಕಾ? ಪಂಡರಪುರವ ಕಾಂಬುದೆಂದು? ಸೇರುವುದೆಂದು? ಶ್ರೀ ವಿಠೋಬನ ದರುಶನವೆಂದು?

ವೃದ್ಧೆ—ತಂಗಿ, ಶ್ರೀ ವಿಠೋಬನ ಕಾಂಬ ನಿನ್ನಾತುರ, ಮಾಲತಿ, ಕಡುವಿದೆ. ಕಿರುಪ್ರಾಯದಲಿ ನಿನ್ನಂತೆ ಆಸರ ಕರೆವವರು ವಿರಳ. ಬಿಸಿರಕ್ತ, ತಾರುಣ್ಯದ ಮೈಸಿರಿ, ಎಳವಿನ ಓಜೆಗೆ ಮನಗೊಡದೆ ಶ್ರೀ ವಿಠೋಬನಲಿ ಚಿತ್ತವಿಟ್ಟ ನೀ ಧನ್ಯಳೈ! ನಿನ್ನ ಹೆತ್ತ ಜನನೀಜನಕರು ಭಾಗ್ಯವಂತರೈ.

ಮಾಲತಿ, ದೈವದ ಒಲ್ಮೆಯಿರೆ ದಿನವೆಂಟರಲಿ ಪಂಡರಪುರವ ಸೇರುವೆವು. ಮರುದಿನ ನಲ್ಮೆಯ ದಿನ. ಶ್ರೀ ಪುರಂದರ ವಿಠೋಬನ ನಚ್ಚಿನ ದಿನ. ಆದರಂತೆ ಹೋಗಲುಂಟೆ? ನಮ್ಮ ಸಖುವ ಬಿಡಲುಂಟೆ?

ಮಾಲತಿ—ಅಕ್ಕಾ, ಆಕೆ ಬರಲೆಂತು ಸಾಧ್ಯವೊ? ಮನೆಕಜ್ಜದಲಿ ಕಾಯ ಬಳಲಿ ಬೆಂಡಾಗಿದೆ. ಶುಕ್ರನೊಡನೆ ಏಳುವಳು; ನಡು ಇರುಳನಕ ಕಜ್ಜಗೈದರೂ ಬೈಗಳು ಮುಗಿಯದು. ಕಾಲಚಕ್ರದಂತೆ ಆಕೆಯ ಜೀವನ. ಶಿಕ್ಷೆ ದಿನೆ ದಿನೆ ಹೆಚ್ಚುತಿದೆ. ಮಾರಿ ಮಾಯಿಯಿಂದಾಗಿ ಆಕೆಯ ಬಾಳು ಹಾಳ್ನರಕ. ಸಖು ಎಂತು ಸೈಹಿಸುವಳೊ? ಹೊತ್ತಾರೆ ಬರುವ ಸಖು ಇನ್ನೂ ಬರಲಿಲ್ಲ. ಆ ರಕ್ಕಸಿಗೆ ತಿಳಿಯಬಂತೆ?

ಅಕ್ಕಾ, ಎಂತು ಸಖು ಬರಲು ಸಾಧ್ಯವೊ?

ವೃದ್ಧೆ—ಮಾಲತಿ, ಆರೊಡನೆಯೂ ನಾನುಸಿರೆತ್ತಿಲ್ಲ. ಎಷ್ಟಕ್ಕೂ ಅವಳ ಕಿವಿಗದು ಸಾರದು. ಸಖೂವಿನ ಕಷ್ಟ ಎಣಿಸುವಾಗ ಕಣ್ಣೀರು ಹರಿಯುತಿದೆ. ಆಕೆ ಮುಂಜಾನೆ ಹಾಡುವ ಇಂಚರ ಗೀತೆಗೆ ವಿಠೋಬನೆಷ್ಟು ದಿನ ಮೈದೋರದೆ ಇರುವನು? ಅನನ್ಯ ಭಕ್ತಿಯುಕ್ತಳು ಸಖು. (ಪ್ರವೇಶ ತಾರೆ)

ಮಾಲತಿ—ಬಂತು ಮಚ್ಚರದ ಉರಿಕೊಳ್ಳಿ; ಸಖುವ ಗೋಳಿಡಿಸುವ ಮುಳ್ಳು. ಅಕ್ಕಾ, ತಾರೆಯು ಕಿವಿಗೆ ಬೀಳದೆ ಅನರ್ಥವಾಗುವುದಾಗ.

ತಾರೆ—ಮಾಲತಿ, ನನ್ನ ಕಂಡು ಏನು ಪಿಸುನುಡಿ? ನನಗೆ ತಿಳಿದಿದೆ. ಪಂಡರಪುರಕೆ ಹೋಗುವ ಪಿಸುನುಡಿ. ನಿಮ್ಮೊಡನೆ ಸಖು ಬರುವಳೆ?

ಮಾಲತಿ—ಅವಳೇಕೆ ಬರುವಳು? ಮಾಯಿಯ ಬಾಯಿಂದ ತಪ್ಪಿದರಲ್ಲವೆ? ಯಾರು ಪಂಡರಪುರಕೆ ಹೋಗುವರು? ಬಹಳ ದೂರವಲ್ಲವೆ, ತಾರೆ? ಕೆರೆಯೇ ತೀರ್ಥ, ಮನೆಯೇ ಕ್ಷೇತ್ರವೆಂದು ವಿಠೋಬನ ಸ್ತುತಿಸಿದರಾಯಿತು. ಶ್ರೀ ವಿಠೋಬನ ದರುಶನ ಪಡೆಯಲು ಸುಕೃತಬೇಡವೆ?

ತಾರೆ—ಚನ್ನಾಗಿ ಮಾತರಿತವಳು. ನೀವು ಹೋಗುವಿರೆಂದೆನಗೆ ಸುದ್ದಿ. ನಿಮ್ಮ ಕೇಳಲು ಬಂದೆ. ಸುಮ್ಮನೆ ದಾರಿನಡೆದು ದೊರೆವುದೇನು? ಹೋಗಿ ಬಂದವರಿಗೆ ಎಣಿಕೆಯಿಲ್ಲ. ಅವರ ಕಷ್ಟ ಹೆಚ್ಚಿದುದಲ್ಲದೆ ಆರಿದುದ ನಾಕಂಡಿಲ್ಲ. ಸುಮ್ಮನೆ ಕಾಯಕಷ್ಟ, ಗಳಿಸಿದ ಕಾಸೆರಡು ವ್ಯಯ. ವೃದ್ಧರಿಗೆ ಈ ಹರಟೆ; ನಿನ್ನಂತ ಎಳವಿಗಲ್ಲ. ಇದ್ದೆರಡು ದಿನ ಸುಖದಿಂದ ಕಳದರಾಯಿತು. ಹಗಳಿರುಳು 'ವಿಠೋಬ ವಿಠೋಬ' ಎಂಬ ಸಖುಗೆ ವಿಠೋಬನೆಂತು ನೆರವಾಗಿರುವ? ಒಣಹರಟೆಯಲ್ಲವೆ, ಮಾಲತಿ?

ಮಾಲತಿ—ತಾರೆ, ನನಗೇನೂ ತಿಳಿಯದು. ಆದರೆ ಸಖುವಿನ ಬಾಳು ಇಂತಾಗುವುದೆಂದಾರೂ ಕನಸಿನಲ್ಲೂ ಕಂಡಿರರು. ಸಖುವ ಗೋಳಾಡಿಸಿದಷ್ಟು ಸಂತಸ ಹೆಚ್ಚುತಿದೆ ಆ ಮಾಯಿಗೆ. ಅವಳ ಕಣ್ಣಳೆ! ಕಿಡಿಯ ಕಾರುತಿವೆ!! ನಾಲಿಗೆಗೆ ವೇದನೆಯಿಲ್ಲ. ಅಬ್ಬಬ್ಬ ಮಾಯಿ ಎಂದರೆ ಮಾ.........

ವೃದ್ಧೆ—ಮಾಲತಿ, ಏತಕ್ಕಾಗಿ ಅವಳ ದೂರುವೆ? ನಾವು ಉತ್ತು ಬಿತ್ತಿದರ ಫಲವನೀಗ ಕೊಯ್ದು ತಿನ್ನುತಿವೆವು ಕಹಿಯೊ ಸಿಹಿಯೊ ನಾವು ಬಿತ್ತಿದಂತೆ. ಹಿಂದಣ ಜನ್ಮದಲಿ ಮಾಡಿದನೀಗ ಎರಡು ಕೈಯಲಿ ಉಣುತಿರುವೆವು. ಅನ್ಯರ ನಿಂದೆಗೈದು ಸಿಗುವುದೇನು, ಮಾಲತಿ?

ಮಾಲತಿ—ಅಕ್ಕಾ, ತಪ್ಪಿತೆನ್ನದು. ನೀನು ತಜ್ಞಳಿರುವೆ ಜೀವನದ ಎಲ್ಲ ಮೊಗವ ನೋಡಿದವಳು. ಏಕೆ ಹೇಳು ಅಕ್ಕಾ, ದೇವರು ಭಕ್ತರನು ಕಾಳ್ಕಿಚ್ಚಿನಲಿ ಸುಡುತಿರುವನು?

ವೃದ್ಧೆ—ಪುಟಕಿಟ್ಟ ಪುತ್ತಳಿಯ ಕಾಂತಿ ಹೆಚ್ಚುವುದು. ಕಿಲುಬು

ಸುಟ್ಟಾರುವುದು. ಶುದ್ಧ ಪುತ್ತಳಿ ಹೊಳೆವುದ ಕಂಡಿಲ್ಲವೆ, ಮಾಲತಿ? ದಣಿವಿಲ್ಲದೆ ತಿರುಪೆ ದೊರೆಯದು ತಿರುಕಗೆ. ಯತ್ನವಿಲ್ಲದೆ ವಿದ್ಯೆ ಹತ್ತದು. ಎಣ್ಣೆ ಬತ್ತಿ ವ್ಯಯವಾಗದೆ ದೀವಿಗೆ ಬೆಳಗದು. ಕಾಯವು ಕಷ್ಟಕ್ಕೀಡಾಗದೆ ಪವಿತ್ರವಾಗದೆಂದು. ಪುಟಕಿಟ್ಟ ಪುತ್ತಳಿಯಂತಾಗ ಬೇಕು ನಮ್ಮ ಮನ. ಮನಕೆ ಅಂಟಿದ ಪಾಪ ಸುಟ್ಟಾರಬೇಕು. ಕಾಯವು ಬತ್ತಿಯಂತೆ ತ್ಯಾಗವಾಗಬೇಕು. ಭಕ್ತಿರಸವು ತೈಲವಾಗಬೇಕು. ಆಗ ಹೃದಯವು ಬೆಳಗುವುದು. ದೈವದ ಒಲ್ಮೆಯಾಗುವುದಾಗ.

ಮಾಲತಿ—ನಚ್ಚಿನ ಅಕ್ಕಾ, ಇದು ನಿಜವೆ? ಸಖು ಪುತ್ತಳಿ! ಸಖುವಿನಂತೆ ಸಂತಸದಿ ಕಷ್ಟ ಸಹಿಸುವವರು.ಈ ಜಗದಿ ಅನ್ಯರಿಲ್ಲ. ಎಲ್ಲವ ವಿಠೋಬನ ಪ್ರಸಾದವೆಂದು ಸ್ವೀಕರಿಸುವಳು. ಸಾಧ್ವಿಸಖೂ, ಭಕ್ತಾಗ್ರಣಿಸಖೂ, ಸಂತ ಸಖೂ ನೀ ಧನ್ಯಳೈ!

ತಾರೆ—ಧರ್ಮಶ್ರವಣ! ಧರ್ಮಪರಾಯಣೆ ಇವಳು!! ಗುರುವಿಗೆ ತಕ್ಕ ಶಿಷ್ಯಳು ಈ ಮಾಲತಿ!!! ಏನು ಜೊತೆ!

ವೃದ್ಧೆ—ಹತ್ತು ಕಾಲ ಕಳೆಯಲಿ. ನನ್ನಂತೆ ನರಿಗಟ್ಟಿದಾಗ ಪಶ್ಚಾತ್ತಾಪವಾಗದಿರದು. ಹಣ್ಣೆಲೆಯ ಕಂಡು ಕಾಯಲೆ ನಗುವುದು ವಿಚಿತ್ರವಲ್ಲ, ತಾರೆ. ಮನದಣಿವಂತೆ ನನ್ನ ಪರಿಹಾಸ್ಯ ಗೆಯ್ಯುತಿರು, ತಾರೆ ರಕ್ತದ ಬಿಸಿ ಆರಲಿ. ಆಗ ತಿಳಿವುದು ನಿನಗೆ, ತಾರೆ.

ತಾರೆ—ನಿನ್ನ ಪುರಾಣ ನಿನಗಿರಲಿ. ನನಗಂತು ಒಗ್ಗದು. ಪೊದೆಯಲ್ಲಿರುವ ಗಿಳಿಯ ಕಂಡು ಕೈಯಲ್ಲಿರುವದನು ಬಿಡುವ ಮೂರ್ಖೆ ನಾನಲ್ಲ. ಹೊತ್ತಾಯಿತೆನಗೆ. ಸಖುವಿನತ್ತೆಯೊಡನೆ ಕಜ್ಜವಿದೆ.....

[ಪ್ರಸ್ಥಾನ]

ಮಾಲತಿ—ಈಕೆ ಅಲ್ಲಿ ಏನ ವಿಷಕರಡಲಿದೆಯೊ? ಅಕ್ಕಾ, ಸಖು ಬರುತಿರುವಳು, ಪವಿತ್ರ ಗಾತ್ರೆ. ನಿಚ್ಚಲ ಚರಿತೆ.

ವೃದ್ಧೆ—ನಡುವಿನಲಿ ಏನನೊ ಮುಚ್ಚಿಟ್ಟಿರುವಳು. ಬಲಗೈಯಿಂದ ಅದನ ಲಾಲಿಸುತಿರುವಳು.

ಮಾಲತಿ—ಅದೇನಿರಬಹುದಕ್ಕಾ? ರುದ್ರಾಕ್ಷಿ ಮಾಲೆಯಾ?

ವೃದ್ಧೆ—ಶ್ರೀ ವಿಠೋಬನ ಮುದ್ದು ಗೊಂಬೆಯದು. ತಾಯಿ ಕೊಟ್ಟ

ಗಂಥದ ಬೊಂಬೆಯುದು. ಅತ್ತೆ ಅದನ ಹತ್ತೆಂಟು ಸಾರಿ ಕಿಚ್ಚಿಗೆಸೆದಳು. ಸಖುವಿನ ಮನೋವ್ಯಥೆ ಹೇಳಿತೀರದಾಗ. ಸಖೂ ಅದನ ರಕ್ಷಿಸಿ ಕಾಪಿಡುವಳು. ಅವಳ ಜೀವನ ಸರ್ವಸ್ವವದು.

(ಸಖೂ ವಿಠೋಬನ ಚಿಂತಿಸುತ ಪ್ರವೇಶಿಸುವಳು. ವೃದ್ಧೆ ಮಾಲತಿಯರು ಆಲೈಸುವರು.)

ಸಖು—ಶ್ರೀ ವಿಠೋಬ ಪಂಡರ ಪುರಕ್ಕೆನ್ನ ಕರದೊಯ್ಯೆಯಾ? ನಾನಂತ ಪಾಪಿಯಾ? ನಿನ್ನವರ ಪಾದ ಪದ್ಮವ ಕಾಂಬ ಭಾಗ್ಯ ಈ ಜನ್ಮದಲಿ ನನಗಿರದೆ? ದೇವಾ, ಇಂದಿಗೆ ಹತ್ತು ದಿನ ಮಾತ್ರ ಉಳಿದಿವೆ. ನಿನ್ನ ಭಕ್ತರು, ಸಂತರು ಹಿಂಡು ಹಿಂಡಾಗಿ ನೆರೆವರಲ್ಲಿ. ಶ್ರೀ ವಿಠೋಬ ಜೈ ಜೈ, ಶ್ರೀ ಪುರಂದರ ಜೈ ಜೈ ಎಂದು ನಲಿದಾಡುವರಲ್ಲಿ. ಅವರ ಹಾಡುವ ಗೀತೆಯಿಂದ ನಿನ್ನ ಗುಡಿಯು ಪಡಿನುಡಿವುದಲ್ಲಿ. ಅವರ ಇಂಚರ ಗಾನಕೆ ನೀ ತಲೆದೂಗುವಿಯಲ್ಲಿ. ನನ್ನ ಕರ್ಕಶ ಸ್ವರ ನಿನಗೆಂತು ಪ್ರಿಯವಾಗುವುದು? ಇಲ್ಲಿಯ ಗೀತೆ ಅಲ್ಲಿಗೆಂತು ಕೇಳುವುದು? ನಾನಿಲ್ಲಿಯೆ ಇರಬೇಕೆ, ವಿಠೋಬಾ?

ವಿಠೋಬ! ನನ್ನಲ್ಲಿ ಭಕ್ತಿರಸವು ಪರಿಪಾಕವಾಗಿಲ್ಲ. ನನ್ನ ಪ್ರೇಮವು ಚಿಂತನೆಯು ಅನನ್ಯವಾಗಿಲ್ಲ. ಇಂತಿರೆ ನಿನ್ನ ಕಾಂಬ ಭಾಗ್ಯವೆನಗೆಲ್ಲಿಯುದು? ಕೌಸ್ತುಬ ಹಾರಿ ವಿಠೋಬ ಜೈ ಜೈ.

ಮಾಲತಿ—ವಿಠೋಬ ಜೈ ಜೈ.

ವೃದ್ಧೆ—ವರ ಪಾಂಡುರಂಗ ಜೈ ಜೈ.

ಸಖು, ಇಂದೇನು ಹೊತ್ತಾಯಿತು?

ಸಖು—(ಏಕಾಗ್ರಚಿತ್ತದಲಿ) ಇಂದಿಗೆ ಹತ್ತು ದಿನ, ಏಕಾದಶಿ ದಿನ. ಯಾತ್ರಿಕರ ಭಾಗ್ಯದಿನ; ಸಂತರ ಸುದಿನ. ಹೇ ವಿಠೋಬ ನಿನ್ನ ಯಾತ್ರಿಣಿಯಾಗುವುದು ನಾನೆಂದು?

ವೃದ್ಧೆ—ಮಗೂ, ಸಖು, ಪರಿಶುದ್ಧ ಯಾತ್ರಿಣಿ ನೀನಿರುವಿ. ನಿನ್ನ ಜೀವನವೆ ಉಚ್ಚತಮ ಯಾತ್ರೆ.

ಮಾಲತಿ—ದೇವಾ, ಏಕೆ ನೀ ಕಷ್ಟವ ಸೃಜಿಸಿದಿ?

ಸಖು—ಹಾಗೆನ್ನದಿರು, ಮಾಲತಿ. ಅವನ ಸೃಷ್ಟಿಯಲ್ಲವು ಕಷ್ಟ, ತಂಗಿ. ಕಾಯುವು ನೆರಳಕೊಡುವುದು. ಅಂತೆ ನಾವೆಸಗುವ ಕರ್ಮ ನಮ್ಮಾ

ತ್ಮವ ಮುಸುಕಿ ಕಾಳ ನೆರಳನೀಯುವುದು. ಇದನ ಕಷ್ಟವೆಂಬರು ಜಗದಲಿ.

ತಾಯೆ, ತಂಗಿ, ನಿನ್ನೆ ನಾನೊಂದ ಕನಸ ಕಂಡೆ. ದಿವ್ಯ ಶ್ರೀ ವಿಠೋಬನ ಮುಂದೆ ನಾನಿತ್ತಂತೆ ಕಂಡೆ. ಆಗ ವಿಠೋಬನಿಂದೊಂದು ದಿವ್ಯ ಜ್ಯೋತಿ ಹರಿಯಿತು. ಕಣ್ಣು ಕುಕ್ಕುವ ಜ್ಯೋತಿ ಸುತ್ತಲೂ ಕವಿಯಿತು; ನನ್ನ ಕಣ್ಣು ಮುಸುಕಿತು, ಆನಂದಾಶ್ರುವು ಸುರಿಸಿದವು. ಈ ಕಾಯ ನನ್ನಗಲುವುದ ಕಂಡೆ. ವಿಠೋಬನ ಪಾದ ಪದ್ಮದಲೆನ್ನ ಈ ಅಲ್ಪಾತ್ಮಲಯವಾಯಿತಾಗ. ನನಗೆ ಎಚ್ಚರವಾಯಿತಾಗ.

ವೃದ್ಧೆ—ಕಾಲವು ಪರಿಪಕ್ವವಾಗಿದೆ. ನಿನ್ನ ಭಕ್ತಿಯು ಅನನ್ಯವಾಗಿದೆ. ನೀನು ನಮ್ಮೊಡನೆ ಪಂಡರಪುರಕೆ ಬರುವಿಯಂತೆ! ಪವಿತ್ರ ಮಗಳೆ, ನಮ್ಮೊಡನೆ ನೀ ಬರುವುದು. ನಾಳೆ ಮುಂಜಾನೆ ಯಾತ್ರಿಕರಾಗುವ. ನೀ ಮಲಗುವ ಕದದ ಬಳಿ ನಾ ಸದ್ದು ಗೈವೆ. ದಿನವೆಂಟರಲಿ ಪಂಡರಪುರವ ಸೇರುವೆವು. ವಿಠೋಬನ ಗುಡಿ ಕಾಂಬೆವು. ವಿಠೋಬನ ದರುಶನವ ಪಡೆಯುವ, ಈ ಪಾಪ ಜನ್ಮವ ಪವಿತ್ರಗೈಯುವ.

ಸಖು—ತಾಯೆ, ನನ್ನಾತ್ಮ ಅಳುತಿದೆ. ನಿನ್ನೊಡನೆ ನಾ ಬರುವೆ.

ಮಾಲತಿ—ಸಖು ನಿನ್ನ ಬಟ್ಟೆಯ ನಾ ಒಗೆಯುವೆ. ಇತ್ತತಾ.

ಸಖು—ಒಂದು ದರುಶನದಿ, ನನ್ನ ಪಾಪ ತೊಳೆವುದು.

ಮಾಲತಿ—ಕೊಡವ ಇತ್ತಕೊಡು, ಸಖು.

ಸಖು—ವಿಠೋಬ, ನಿನ್ನ ಪಾದ ಪದ್ಮದಲಿ ಈ ಕೊಡವನರ್ಪಿಸುವೆ.

ವೃದ್ಧೆ—ಮರೆಯದಿರು, ಮಗಳೆ. ಮುಂಜಾನೆ ತೆರಳುವುದು

ಸಖು—ತಾಯೆ, ನನ್ನಾತ್ಮ ಅಳುತಿದೆ. ನಿನ್ನೊಡನೆ ನಾ ಬರುವೆ. ಒಂದು ದರುಶನದಿ ನನ್ನ ಪಾಪ ತೊಳೆವೆ.

ದೃಶ್ಯ ೨

(ಬಂಧನ—ಸಮಯ ನಡಿರುಳು—ಸಖುವಿನ ಮನೆ.)

ಅತ್ತೆ, ಪತಿ, ಕಂಬಕೆ ಕಟ್ಟುತಲಿಹರು.

ಅತ್ತೆ—ನಿನ್ನ ಗಡುಸೆ! ಇಲಿಯು ಸೊಕ್ಕೆ!! ಸಾಕುಮಾಡಿನ್ನು ನಿನ್ನ ಮರುಳುತನ. ಬೆಕ್ಕಿನಕಣ್ಣ ಇಲಿ ಎಷ್ಟು ಸಮಯ ತಪ್ಪಿಸಬಹುದು? ಪಂಜರದಲಿ ನರಳುತಿರು!

ಹೆ ಜಾರೆ! ನಿನಗೆ ಯಾತ್ರೆಯು ಹುಚ್ಚೆ! ನಿನ್ನ ಹೊಂಚೆ! ಆ ಮುದಿಗೂಬೆಯೊಡನೆ ನಿನ್ನ ಹೊಂಚೆ. ನಡಿರುಳ ಮೊದಲು ಕಜ್ಜ ಮುಗಿಸಿ ಅಡಗಿರಲು ಹವಣಿಸಿದೆ. ಆ ಗೂಬೆ ಬರುವ ಹೊತ್ತಾಯಿತು. ನಿನ್ನ ಗುಟ್ಟು ರಟ್ಟಾಯಿತು. ಏನು, ನಮಗೆ ಹೇಳದೆ ಆ ಗೂಬೆಯೊಡನೆ ದಾರಿಕೀಳುವ ವಂಚನೆಯೆ? ನಾ ಕುರುಡೆಯೆಂದು ನಿನ್ನೆಣಿಕೆಯಾ? ಬಲ್ಲೆ ನಾ ನಿನ್ನೆಲ್ಲ ಹವಣೆಯು.

ಏಕೆ ಮಾತನಾಡದೆ ಇರುವೆ, ಮಗನೆ? ಕಂಡೆಯಾ ಜಾರೆಯ ಕುಟಿಲ ಮನವ? ಹೊಂಚುತಲಿರುವ ಕುಟಿಲೆ! ನಮ್ಮ ಕುಲಕೆ ಕಳಂಕ ಬಳಿವ ಚಂಚಲೆ!

ಪತಿ—ಯಾತ್ರಿಣಿ! ಜಾರೆ!! ಒಂದಾಗಿಹ ಪ್ರಾಣಿ!!! ಪತಿಯ ಸೇವೆಯ ತ್ಯಜಿಸಿ ಹಲಬರ ದಾಸಿಯಾಗಲು ಹೋಗುವ ಸೋಣೆನಾಯಿಯೆ! ಚಂಚಲೆ, ಚಪಲೆ, ನಿನ್ನ ಹೆಸರು ಹೆಂಗಸೆ!

ನಿನಗೆ ಚಂದಿರನ ಮೊಗ; ಅನೇಕರ ಮರುಳುಮಾಡಲು. ಆದರೆ ಕಾಳಬಗೆ ನಿನ್ನದು. ಕಣ್ಣಿನ ಕೊಂಕುಡೊಂಕು ಹಾವ ಬಾವದಿ ಅನಿಬರ ಸೆಳೆವ ಯಕ್ಷಿಣಿ!

ವಿಧಿಯನ್ನ ನಿನ್ನೊಡನೆ ಬಾಳ ಬಂಧಿಸಬೇಕೆ? ಹಲಬರ ಪಾಪ ಕೊಳದಲಿ ಮುಳುಗಿಸಲು ಹೋಗುವುದು ಯಾತ್ರೆಯಾ? ದೈವದೊಲ್ಮೆಯ ಯಾತ್ರೆಯಾ? ಸಗ್ಗಕೊಯ್ಯುವ ಯಾತ್ರೆಯಾ?

ಸಾಕು ಜಾರೆ! ದೇವದಾಸಿಯಾಗಲು ನಿನ್ನ ಮನವೆ? ನೀನು ನಿಜದಿ ಚಂಚಲೆಯ ಪುನರವತಾರ! ವಿಧಿವಶದಿ ನಾ ನಿನ್ನ ಪತಿ. ನನ್ನ ಮಾತ ನೀ ಮೀರಲಾಗದು. ಇಲ್ಲಿಯೆ ನೀನಿದ್ದು ನರಳುತ್ತಿರಬೇಕು. ಪಂಡರಪುರಕೆ ನೀ ಹೋಗಬಾರದೆಂದೆನ್ನ ಆಣೆ. ಚಪಲಗೆ ಬಂಧನವೆ ದಿವ್ಯೌಷಧ!

ಸಖು—ಪತಿದೇವ, ನೀವೆನ್ನ ಕಾಯುಕೆ. ಮರಳಿಂದಾಗಿ ಮರಳ ಸೇರುವ ಈ ಕಳೇಬರಕೆ ನೀವೆನ್ನ ಪತಿದೇವ. ಇಂದಿನ ವರೆಗೆ ನಿಮ್ಮ ಸೇವೆ ಗೈದೆ. ಆತ್ಮ ಪರಮಾತ್ಮನದು. ಪರಮಾತ್ಮನ ಸೇವೆ ಗೈಯ್ಯಬೇಕಿದೆ. ಅದ ಕಾಗಿ ಹೋಗುವುದು ನಾ ವಿಠೋಬನ ಗುಡಿಗೆ. ನಾ ಜಾರೆಯಲ್ಲವು. ಅದ ಕಾಗ ಹೋಗುವುದು ನಾನಲ್ಲ. ನೀವು ಬಂಧಿಸುವುದು ಧರ್ಮವಲ್ಲ. ತಡೆವುದು ಉಚಿತವಲ್ಲ.

ಅತ್ತೆ—ಧರ್ಮಪುಸ್ತಕವೆ! ಶಾಸ್ತ್ರವೆಲ್ಲ ನಿನ್ನೊಳಗೆ. ಅನ್ಯರ ಮನಸೆಳೆ ವುದು ಪತಿಭಕ್ತಿ. ಪತಿಯ ಮಾತ ಮೀರುವುದು ಧರ್ಮ. ಹೂ ಶಾಸ್ತ್ರವ ಕಾರುತ ಇರುಳಿಡಿ ಇಲ್ಲಿರು. ಆ ಮುಧಿ ಗೂಬೆ ಇತ್ತ ಸುಳಿವಂತಿಲ್ಲ. ನೀ ಅವ ಳೊಡನೆ ಹೋಗುವುದನು ನಾ ನೋಡುವೆ. ಪಂಡರಪುರವ ನೆನೆಯಿತ ಇಲ್ಲಿಯೇ ಚಳಿಯ ಸವಿ ನೋಡುತಿರೆ.

ಪತಿ—ಕ್ಷಣ ಚಿತ್ತದೈವರೊಳು ಭಕ್ತಿ. ಮಿಂಚಿನ ಆಯು ಭಕ್ತಿಗೆ. ಸ್ಥಿರವಾಗಿ ಎರಡು ಗಳಿಗೆ ನಿಲ್ಲದು ಭಕ್ತಿ ಯಾರಲ್ಲಿಯೂ. ಬೆಳಗಾಗುವ ಮೊದಲು ನಿನ್ನ ಭಕ್ತಿರಸ ಬತ್ತುವುದು. ಆ ಗೂಬೆ ಅಮಲ ಕುಡಿಸಿದಳು. ಹೊತ್ತೇರವ ಮೊದಲು ಆ ಅಮಲು ಇಳಿವುದು.

ಅತ್ತೆ—ಮನೆ ದಾಸಿ. ಸಾಕು ಮಾಡಿನ್ನು ಯಾತ್ರೆಯ ಆಸೆಯ. ಮಗನೆ ನಡಿರುಳು ದಾಟಿತು. ಈ ಮಾರಿಯಿಂದಾಗಿ ನಿದ್ದೆಗೆಟ್ಟಿತು.

(ಸೊಡರು ಹಿಡಿದು ಸಾಗುವಳು.)

ಪತಿ—ಇಂದಿನ ಮೇಲಾದರೂ ಅಬ್ಬೆಯ ಮಾತಿನಂತಿರು. ನಿನಗೆ ಸುಖವಕ್ಕು. (ಹಿಂಬಾಲಿಸುವನು.)

ಸಖು—(ಕತ್ತಲೆಯುಲಿ ವಿಠೋಬನ ಚಿಂತಿಸುತ) ಶ್ರೀ ವಿಠೋಬ. ನನ್ನಾ ಸೆಯು ಆಸೆಯೂ? ನಾನಂತ ಕಡು ಪಾಪಿಯೂ? ಹಿಂದಣ ಜನ್ಮದಲಿ ಯಾರ ಯಾತ್ರೆಗೆ ಕಲ್ಲೆಸೆದಿದ್ದೆನೋ? ಇರಲಿ. ಎಲ್ಲವೂ, ವಿಠೋಬ, ನಿನ್ನಾಜ್ಞೆಯಂತೆ. ನಿನ್ನಿಷ್ಟವಿದ್ದಾಗ ಕರೆಯಿಸೆನ್ನ. (ಸದ್ದು. ಸದ್ದು.) ಈ ಕಾರಿರುಳಲ್ಲಿ ಅದಾರದು?

ವಿಠೋಬ—(ವೃದ್ಧೆಯ ವೇಷದಿಂದ) ಮಗೂ ಸಖು. ಎಚ್ಚರವಾಗಿಲ್ಲವೆ?

ಸಖು—ತಾಯೆ ಎಂತು ಪ್ರವೇಶ? ನಾನಿಲ್ಲಿರುವ ತಿಳಿವೆಂತು?

ವಿಠೋಬ—ತಿಳಿಯನೆ ವಿಠೋಬ? ಭಕ್ತಾಧೀನನಲ್ಲವೆ? ವಿಠೋಬ ಅವ

ನೆನ್ನ ಇತ್ತ ಕಳುಹಿದುದು. ಹೊತ್ತಾಯಿತು, ಮಗೂ, ಮಾಲತಿ ದಾರಿ ಕಾಯುವಳು.

ಸಖು—ತಾಯೇ, ವಿಠೋಬನ ಕರುಣೆಯಿದು. ನನ್ನ ಬಂಧಿಸಿದರು. ನಾ ಕದಲಲಾರೆ.

ವಿಠೋಬ—ಅದೇತರ ಕೆಲಸ?

ಸಖು—ಇದೇನು? ಇಲ್ಲ ಬಂಧನ. ನಿನ್ನ ಸ್ಪರ್ಶ ಬಂಧನವ ಮುರಿಯಿತೆನ್ನ. ವಿಠೋಬನ ಮೈಮೆ. ವಿಠೋಬ ಜೈ ಜೈ. ವಿಠೋಬ ನಿನ್ನ ಯಾತ್ರಿಣಿಯಾಗಲು ಆಜ್ಞೆಯ ಕರುಣಿಸು. ವಿಠೋಬ ಜೈ ಜೈ.

ವಿಠೋಬ—ವಿಠೋಬನೆ ಬಿಡಿಸಿದನು. ಅದೇ ಆತನಾಜ್ಞೆಯುಂದರಿ. ಮಾಲತಿ, ನಿನ್ನ ಕಾಣಲು ಹಾತೊರೆಯುವಳು.

ಸಖು—ವಿಠೋಬ, ನನ್ನ ಜನ್ಮವ ಸಾರ್ಥಕ ಮಾಡಿದಿ. ನಿನ್ನ ಯಾತ್ರಿಣಿಯಾಗಲು ಭಾಗ್ಯವಿತ್ತಿ. ಕರುಣಾಕರ ವಿಠೋಬ ಜೈ ಜೈ.

ವಿಠೋಬ—ಕೊಳದ ಬಳಿ ಮಾಲತಿ ಇರುವಳು.

(ಹೊರಡುವರು.)

ಸಖು—ವಿಠೋಬ ಜೈ ಜೈ ವರಪಾಂಡುರಂಗ ಜೈ ಜೈ.

ವಿಠೋಬ—ತುಸು ಸಮಯದೊಳಗೆ ನಿನ್ನ ಸೇರುವೆ. ಕೊಳದ ಬಳಿ ಮಾಲತಿ ಇರುವಳು.

ಸಖು—ತಾಯಿ, ನಿನ್ನಾಜ್ಞೆಯಂತೆ. (ವಿಠೋಬ ಅದೃಶ್ಯ.)

ವಿಠೋಬ ಜೈ ಜೈ.

[ಪ್ರಸ್ಥಾನ]

ದೃಶ್ಯ ೩---ಪ್ರವಾಸ

(ಪ್ರದೇಶ—ಕೊಳ. ಸಮಯ—ಮುಂಜಾನೆ.)

[ಪ್ರವೇಶ—ಸಖು]

ಸಖು—ವಿಠೋಬ, ಭಕ್ತವಲ್ಲಭ ಆತ್ಮದೇವ! ಕಿರುಪ್ರಾಯದಲಿ ತಿಳಿದೆ ನಿನ್ನ ಮೈಮೆ ಸಂತರ ಸೊಲ್ಲಿನಿಂದ. ಅಬ್ಬೆ ತಿದ್ದಿ ಒಪ್ಪಿಟ್ಟಳೆನ್ನ ನಿನ್ನ ಹಾಡಲು. ಅಪ್ಪನು ನಿನ್ನ ಸ್ತುತಿಪಾಗ ನಿನ್ನ ಕಾಂಬ ಆಸೆ ಮೊಳೆಯಿತು. ಆ ದಿನಗಳು ಸಾಗಿದವು. ಅಪ್ಪನ ಗಾನ, ಅಬ್ಬೆಯ ಇಂಚರ ಗೀತೆ ಕೇಳುವ ದಿನಗಳು ಮುಗಿದವು. ನನ್ನ ಕಾಲ್ಗಳು ಮನೆಯಿಂದ ಅಗಲಲು ಮರುಗಿದವು. ಕಣ್ಗಳು ನೀರ ಕರೆದವು. ನಿನ್ನ ನಾಮ ಸ್ಮರಣೆ ಪಡಿನುಡಿವ ಮನೆ ಬಿಡುವ ದಿನ; ಹೃದಯುವೆ ಭಗ್ನವಾದ ದಿನ. ದೇವಾ, ಅಬ್ಬೆ ಸಂತೈಸಿದ ದಿನ. ನನ್ನ ಪ್ರಾಣ ಗಿಂತ ಮೇಲಾದ ನಿನ್ನ ಈ ಬೊಂಬೆಯಿತ್ತ ದಿನ. ಇವೆಲ್ಲ ನೆನವಾಗುವೆ, ದೇವಾ.

ಅಬ್ಬೆಯು ಅಪ್ಪನು ನಿನ್ನ ಸ್ತುತಿಪಾಗ ಬಳಿಕುಳಿತು ನಿನ್ನ ಮೈಮೆ ಕೇಳುವ ಭಾಗ್ಯವಿಲ್ಲೆನಗೆ. ಅವರೆನ್ನ ಬಳಿ ಸುಳಿಯಂತಾಜ್ಞೆ. ನಾ ಪಾಪಿ, ನನ್ನಿಂದಾಗಿ ಅವರಿಗೆ ಸಹಿಸದ ದುಃಖ. ನನ್ನ ಜನ್ಮ, ವಿಠೋಬ, ನಿನ್ನ ಚರಣ ದಲಿ ಲಯವಾಗಲಿ. ಇದೆನ್ನ ಕೊನೆಯ ಬಯಕೆ. ನಿನ್ನ ಪಾದ ಪಂಕಜ ದಲಿ ಆತ್ಮ ಅರ್ಪಿಸುವ ಕೊನೆಯ ಬಯಕೆ. ನೀ ಕರುಣಿಸು. ವಿಠೋಬ, ಈ ಬಯಕೆ.

ಬುದ್ಧಿನೀಕರುಣಿಸಿದಂದಿನಿಂದ ನಿನ್ನ ಸ್ಮರಣೆಯ ಬಿಡಲಿಲ್ಲವು. ಹಗಲು ಮನೆ ಕಜ್ಜದಿಂದ ನಿನ್ನ, ಧ್ಯಾನಿಸಲು ಇಂಬು ದೊರೆಯದಿರುವುದ ನೀ ಬಲ್ಲೆ. ಅಂತಾದರೂ ಕಾಯಕಷ್ಟಕೆ ಮನವ ಹಚ್ಚದೆ ನಿನ್ನ ಪ್ರಸಾದವೆಂದು ನಿನ್ನ ನಾಮಧ್ಯಾನವ ಬಿಡದಿದ್ದೆ. ನನ್ನ ಭಕ್ತಿಯು ಪರಿಪಕ್ವವಾಗಿಲ್ಲ. ಇಲ್ಲ ಇದನ ನಾ ತಿಳಿದಿರುವೆ. ನೀ ಕಲಿಸದೆಂದು ಬೇಡುವೆ. ದೇವಾ ಹೃದಯವು ಒಂದು ಕ್ಷಣವಾದರೂ ನಿನ್ನ ಧ್ಯಾನವ ತ್ಯಜಿಸಿದೆಯೆ? ನನ್ನ ಭಕ್ತಿಯು ಚಂಚಲವೆ? ಪ್ರಹ್ಲಾದನಂತೆ ಪರಿಪಕ್ವವಾಗದಿರಬಹುದು. ನನ್ನ ಪಾಪವ ತೊಳೆಯ ಬೇಕೆಂದು ಬೇಡುವೆ. ಪ್ರೇಮ ಪರಿಪಕ್ವವಾಗಲು ಕಲಿಸೆಂದು ಬೇಡುವೆ. ನಿನ್ನ ಬಳಿಗೆನ್ನ ಕರೆದೊಯ್ಯೆಂದು ಬೇಡುವೆ.

ಆಕಾಶವಾಣಿ—ಸಖು!

ಸಖು—ಮಾಲತಿಯಾ? ಇರದು. ಕೊಳದಬಳಿ ಬಂದಿರುವೆ. ಮಾಲತಿ ಕಾಣಿಸಳು, ಯಾರೆನ್ನ ಕರೆವರು?

ಆಕಾಶವಾಣಿ—ಸಖು!

ಸಖು—ಬಾನಿನ ನುಡಿಯಿದು. ವಿಠೋಬ, ಕರೆದೆಯಾ?

ಆ. ವಾಣಿ—ಸಖು, ಚಿಂತಿಸದಿರು, ವಿಠೋಬ ನಿನ್ನ ಕಾಯುತಿರುವ.

ಸಖು—ವಿಠೋಬ ಇಲ್ಲಿ ಮರೆಯಾಗಿರುವೆಯಾ? ಪಂಡರ ಪುರದೊಳಗೆ ನನ್ನ ಬಯಕೆಯ ಕರುಣಿಸುವೆಯಾ? ಒಳ್ಳಿತು, ವಿಠೋಬ. ಸಂತರೊಡನೆ ಮನದಣಿಯೆ ನಿನ್ನ ಹಾಡುವೆನಲ್ಲಿ. ನಲಿವೆನಲ್ಲಿ. ಆತ್ಮವ ನಿನಗರ್ಪಿಸುವೆನಲ್ಲಿ.

(ಮಾಲತಿ—ವೃದ್ಧೆ ಪ್ರವೇಶ)

ವೃದ್ಧೆ—ಸಖು ಇಲ್ಲಿರುವೆಯಾ? ಅಚ್ಚರವಿದು ಸಖು! ಇದೇನು, ಸಖು? ನೀನಿಲ್ಲಿಗೆಂತು ಬಂದೆ?

ಸಖು—ಏನು, ತಾಯಿ, ನೀನಲ್ಲವೆ ಬಂಧನವ ಬಿಡಿಸಿದವಳು? ಕೊಳದ ಬಳಿ ಮಾಲತಿ ಇರುವಳೆಂದವಳು?

ವೃದ್ಧೆ—ನನಗಾವುದು ತಿಳಿಯದು, ಸಖು. ನೀ ಮಲಗುವ ಕದದ ಬಳಿ ಸದ್ದುಮಾಡಿದೆ. ಉತ್ತರವು ದೊರೆಯಿತಾಯಿತಲ್ಲಿ. ತಿರುಗಿ ಸದ್ದುಗೈಯಲು ಭಯವಾಯಿತು. ಒಳಗೆ ನಿನ್ನತ್ತೆಯ ಮಾತುಕೇಳಿತು. ಹೊಂಚು ಹಾಕುವ ಅತ್ತೆಯ ಬಿರುನುಡಿ ಕೇಳಿತು. ''ಸಖು ಬಾರಳು. ಗೂಬೆ, ನಡಿ ಇಲ್ಲಿಂದ'' ಎಂಬ ಮುನಿಸಿನ ನುಡಿಕೇಳಿತು. ನಿರಾಸೆಯಿಂದ ಕಂಬನಿಗರೆಯುತ ಸಾಗಿದೆವು. ನಿನ್ನೊಡನೆ 'ಪ್ರವಾಸ' ಬಳೆಯಿಸಲು ''ಪುಣ್ಯವಿಲ್ಲೆಂದು ಅಳುತ ಬಂದೆವು. ದೂರದೊಳಿದ್ದು ಕತ್ತಲೆಯ ಮಬ್ಬಿನೊಳು ಒಂದು ರೂಪಕಾಣಿಸಿತು. ನೀನೆಂದು ತಿಳಿವುದೆಂತು? ಬಳಿ ಸಾಗಿದ ಮೇಲೆ ''ನಮ್ಮ ಸಖು'' ಎಂದು ತಿಳಿವಾಯಿತು. ನಮ್ಮ ಕಣ್ಗಳು ಮೊದಲು ನಂಬಲಾರದೆ ಹೋದುವು. ಸಖು, ನೀನೆಂತು ಇಲ್ಲಿಗೆ ಬಂದೆ?

ಮಾಲತಿ—ಅತ್ತೆಯ ಕಣ್ಗಳಿಂದೆಂತು ಪಾರಾದೆ, ಸಖು?

ಸಖು—ನನಗೂ ಅಚ್ಚರವಾಗುತಿದೆ. ಬಂಧನದಿಂದೆನ್ನ ಬಿಡಿಸಿದವಳು ನೀನಲ್ಲವೆ, ತಾಯಿ?

ವೃದ್ಧೆ—ಇಲ್ಲ, ಸಖೂ. ಎಂಥ ಬಂಧನ? ನನ್ನ ಮಾತನ್ನು ನಂಬೆಯಾ?

ಸಖು—ಅಪನಂಬುಗೆಯಿಲ್ಲವೆನಗೆ, ತಾಯೆ. ಆಶ್ಚರ್ಯದಿಂದ ಬೆರಗಾಗಿರುವೆ. ವಿಠೋಬನ ಮೈಮೆ ಎನ್ನಬೇಕು.

ಮಾಲತಿ—ಸಖು, ವಿಠೋಬನ ಮೈಮೆಯ ನಾ ಕೇಳಬಾರದೆ?

ಸಖು—ಮಾಲತಿ, ವಿಠೋಬನ ಮೈಮೆ ಬಣ್ಣಿಸಿ ಮುಗಿವಂತಿಲ್ಲ. ಆಂದಾದ ಅಚ್ಚರವ ಹೇಳುವೆ.

ಮಾಲತಿ—ನಮ್ಮನ್ನಗಲಿದಂದಿನಿಂದ ಸೇರುವ ತನಕದ ಆ ಚರಿತೆಯ ಹೇಳಬೇಕು, ಸಖು.

ಸಖು—ಮಾಲತಿ, ಕೇಳುತಿರು ತಾಯೆ. ನಿಮ್ಮ ನಾ ಆ ಕೊಳದ ಬಳಿ ಅಗಲಿದೆ. ಮನೆಯ ಸೇರುವಾಗ ತಾರೆಯಿದ್ದಳಲ್ಲಿ.

ಮಾಲತಿ—ಅಹುದು. ಆ ಜಾರೆ ಏನು ವಿಷಕರಡುತಿದ್ದಳೊ?

ಸಖು—ಹಾಗನ್ನದಿರು, ಮಾಲತಿ. ನಾವು ಹಿಂದಣ ಜನ್ಮದಲಿ ಬಿತ್ತಿದ್ದನ್ನು ಈಗ ತಿನ್ನುತಿರುವೆವು. ತಾರೆಯ ದೂಂದರೆ ನಮ್ಮ ಪಾಪ ತೊಳೆವುದೆ?

ವೃದ್ಧೆ—ಮುಂದೇನು, ಸಖೂ?

ಸಖು—ಎಲ್ಲವು ಎಂದಿನಂತೆ.

ಮಾಲತಿ—ಸಹಸ್ರನಾಮ!!!

ಸಖು—ತಾರೆ ಅತ್ತೆಯೊಡನೆ ಗುಣುಗುಟ್ಟುತ್ತಿದ್ದಳು. ರಾತ್ರಿ ಊಟ ತೀರಿದರೂ 'ತಾರೆ' ಅವರೊಡನೆ ಏನೊ ಅನ್ನುತಿದ್ದಳು. ನನ್ನ ಕಜ್ಜವ ಬೇಗ ತೀರಿಸಿ ಮಲಗುವ ಕೋಣೆಯ ಸೇರಿದೆ. ಸೊಡರಿನ ಎಣ್ಣೆ ಆರಿತೆಂದು ಎಣ್ಣೆ ತರಲು ಹೋದೆ. ಆಗ ತಾರೆ ಹಗ್ಗ ತರುವದ ಕಂಡೆ. ಅವರ ಕೈಯಲಿ ಕೊಡುವುದ ಕಂಡೆ.

ಮಾಲತಿ—ತಾರೆಯ ಆಸೆ ಫಲಿಸಿತು. ಇರುಳಲಿ ಅನ್ಯ ಪುರುಷನೊಡನೆ ಸಂಕೇತ! ಸಖು, ನೀ ಮುನಿದರೂ ನಾ ಸೈಸುವೆ. ಆದರೆ ಸತ್ಯವ ಮುಚ್ಚಿಡಲಾರೆ. ಆ ಮಾಯಾವಿಯ ಕುತಂತ್ರ ನೀ ತಿಳಿಯೆ. ಗೃಹಛಿದ್ರಗೈವ ತಾರೆ! ತಾರೆ ನೀ ಜಾರೆ!!

ವೃದ್ಧೆ—ಮಾಲತಿ, ಆ ಪಾಪದ ಸುದ್ದಿ ನಮಗೇಕೆ?

ಮಾಲತಿ—ಸಖು ಸೈಸುವಳು. ನೀವು ಕಣ್ಣ ಮುಚ್ಚುವಿರಿ. ಆದರೆ

ನನ್ನ ಹೃದಯ ಸೈಸದು. ನನ್ನ ಪತಿಯ ಕೆಡಿಸಿದ ಆ ಜಾರೆ! ಹದಿಬದೆ ಸಖುವ ಗೋಳಿಡಿಸುವ ಆ ಜಾರೆ! ನಿನಗೇಕೆ ಮರಣ ಬರಬಾರದು?

ಸಖು—ಮಾಲತಿ, ಬೇಡುವೆ ಹಾಗೆನ್ನದಿರು.

ವೃದ್ಧೆ—ಮಾಲತಿ, ನಿನ್ನ ನಾಲಗೆಯ ಬಿಗಿಹಿಡಿ. ಮುಂದೇನು ಸಖು?

ಸಖು—ಎಲ್ಲರೂ ನಾನಿರುವ ಕೋಣೆಗೆ ಬಂದರು.

ಮಾಲತಿ—ಆ ಜಾರೆಯೂ?

ಸಖು—ಇಲ್ಲ. ತಾರೆ ಹೊರಗೇ ಇದ್ದಳು. ಇಬ್ಬರೂ ಕಟ್ಟಿದರೆನ್ನ; ಮನದಣಿಯೆ ಹೊಡೆದು ತುಳಿದರೆನ್ನ.

ಮಾಲತಿ—ಸಖು, ನೀನೆಂತು ಸೈಸಿದೆ?

ಸಖು—ವಿಠೋಬನ ನಾಮ ಕಾಯಿತೆನ್ನ. ನನ್ನ ಬಂಧಿಸಿ ನಿದ್ದೆಗೆ ತೆರಳಿದರು. ಕಣ್ಣಿಗೆ ನಿದ್ದೆ ಹತ್ತದಾಯಿತೆನಗೆ. ವಿಠೋಬನ ನೆನೆಯುತ ಇದ್ದೆ. ಆಗ ಕದದ ಬಳಿ ಸದ್ದಾಯಿತು. ಬಾಗಿಲು ತೆರೆಯಿತು ತಾಯೆ, ನೀನೆ ಬಂದೆ ಆಗ.

ವೃದ್ಧೆ—ಇಲ್ಲ ಸಖು, ವಿಠೋಬನೇ ನನ್ನ ರೂಪದಿ ಬಂದುದು!

ಸಖು—ಆ ವೃದ್ಧೆ ನನ್ನ ಮುಟ್ಟುವ ಮೊದಲು ಬಂಧನವು ಸಡಿಲಾಯಿತೆನ್ನ. ಕೊಳದ ಬಳಿ ಮಾಲತಿ ಇರುವಳೆಂದು ತೆರಳಿದಳು. ತುಸು ಸಮಯದಲಿ ಬರುವೆ ಎಂದಳು.

ಮಾಲತಿ—ಸಖು, ಸಖು, ಬರುವೆ. ವಿಠೋಬನೇ ಆ ವೃದ್ಧೆ.

ಸಖು—ಮಾಲತಿ, ಆ ಕೊಳದ ಬಳಿ ನೀನಿರಲಿಲ್ಲ. ಆಗ ಸಖು, ಸಖು ಎಂದು ಕರೆದರೆನ್ನ. ನಿನ್ನ ದನಿಯಲ್ಲವದು. ಬಾನಿನ ನುಡಿ ಕೇಳಿತು. 'ಸಖು, ಚಿಂತಿಸದಿರು. ವಿಠೋಬ ನಿನ್ನ ಕಾಯುತಿರುವನು' ಎಂಬ ನುಡಿಕೇಳಿತು.

ವೃದ್ಧೆ—ಪವಿತ್ರ ಚರಿತೆ, ಸಖೂ! ವಿಠೋಬನು ನಿನ್ನ ಕರೆಯುತಿರುವನು.

(ಸಂತರ ಪ್ರವೇಶ)

ಸಂತರು—ವಿಠೋಬ ಜೈ ಜೈ! ಪಾಂಡುರಂಗ ಜೈ ಜೈ!

ಸಖು—ಮಾಲತಿ, ಸಂತರು ಹಿಂಡಾಗಿ ಬರುತಿರುವರು. ನಾವವರೊಡನೆ ಕಲೆಯುವ. ವಿಠೋಬನ ಸ್ತುತಿಸುವ. ವಿಠೋಬನ ದರುಶನವ ಪಡೆಯುವ.

ಮಾಲತಿ—ವಿಠೋಬ ಜೈ ಜೈ.
ಸಖು—ವರಪಾಂಡುರಂಗ ಜೈ ಜೈ.
ಎಲ್ಲರು—ವಿಠೋಬ ಜೈ ಜೈ.

ದೃಶ್ಯ ೪—ಅರ್ಪಣೆ

(ಪ್ರದೇಶ—ಪಂಡರಾಪುರ—ವಿಠೋಬನ ಗುಡಿ)

(ಪ್ರವೇಶ—ಸಖು, ವೃದ್ಧೆ, ಮಾಲತಿ, ಸಂತರು)

ಸಖು—ವಿಠೋಬ ಜೈ ಜೈ! ಪಾಂಡುರಂಗ ಜೈ ಜೈ.
ಸಂತರೆಲ್ಲರು—ವಿಠೋಬ ಜೈ ಜೈ! ಪಾಂಡುರಂಗ ಜೈ ಜೈ.
ಸಖು—ಪಂಕಜನಯನ ವಿಠೋಬ ಜೈ ಜೈ.
ಎಲ್ಲರು—ಪಂಕಜನಯನ ವಿಠೋಬ ಜೈ ಜೈ.
ಸಖು—ಪಂಕಜವದನ ವಿಠೋಬ ಜೈ ಜೈ.
ಎಲ್ಲರು—ಪಂಕಜವದನ ವಿಠೋಬ ಜೈ ಜೈ.
ಸಖು—ಪಂಕಜನಾಭ ವಿಠೋಬ ಜೈ ಜೈ.
ಎಲ್ಲರು—ಶ್ರೀ ಪುರಂದರ ವಿಠೋಬ ಜೈ ಜೈ. ಪಂಕಜನಾಭ ವಿಠೋಬ ಜೈ ಜೈ. ಶ್ರೀ ಪುರಂದರ ವಿಠೋಬ ಜೈ ಜೈ.

ಸಖು—ವಿಠೋಬ! ರಖುಮಾಯಿ ವಿಠೋಬ. ಭಕ್ತವಲ್ಲಭ ವಿಠೋಬ, ಉದ್ಧರಿಸೆನ್ನ ಸ್ವೀಕರಿಸೆನ್ನ ಅರ್ಪಣೆಯ. ವಿಠೋಬ, ವಿಠೋಬ ತೋರೆಯಾ? ಬಾ ಎಂದೀಗ ಮರೆಯಾ? ಮೂರ್ತಿರೂಪವ ಬಿಟ್ಟು ನಿಜ ರೂಪವ ತೋರೆಯೊ? ನನ್ನ ಪರೀಕ್ಷಿಸಿ ಮುಗಿಯಲಿಲ್ಲವೆ? ವಿಠೋಬ, ಬಂಧನವ ಬಿಡಿಸಿದೆ. ಹೋಗೆಂದು ಆಜ್ಞೆಯನಿತ್ತಿ. ಕೊಳದ ಬಳಿ 'ಬಾ' ಎಂದು ಈಗ ಮೌನವೆ? ನಿನಗೆ ಸಖುಗೆ ತೋರಲು ಮನ ಬಾರದೆ? ಇಂತಿರೆ ಏತಕೆಂದೆನ್ನ ಬಿಡಿಸಿದೆ? ಅಲ್ಲಿಯೆ ಸೇವೆ ಗೈಯುತಲಿದ್ದೆ. ನನ್ನಲಿ ಪವಿತ್ರತೆ ಸಾಕೆಂದಾಗ ಕರೆಯಿಸ ಬಾರದಿತ್ತೆ? ಅಲ್ಲಿಯ ಕಷ್ಟವ ನಿನ್ನ ನಾಮಕಾಯಿತು. ಇಲ್ಲಿ ನಿನ್ನ ಕಾಣದ ಸಂಕಟ ಸೈಸುವಂತಿಲ್ಲ. ನಿನ್ನ ಕಾಣದ ಬಾಳೇಕೆ ನನಗೆ? ನಿನ್ನ ಪಾದಾಬ್ಜದಲಿ ಈ ಕೊಡವನರ್ಪಿಸುವೆ.

ವಿಠೋಬ, ವಿಠೋಬ ನುಡಿಯಿರದೆ? ರಖುಮಾಯಿ ಬಿಡಬಾರದೆ ವಿಠೋಬನ? ದಯದೋರಬಾರದೆ? ಏಗಳೂ ನಿನ್ನ ಬಳಿ ವಿಠೋಬ, ರಖುಮಾಯಿ! ಅರೆಕ್ಷಣ ನನಗೆ ಕಾಣಲು ಬಿಡಬಾರದೆ? ನಿನ್ನ ಪ್ರೇಮಪಾಶದಿಂದ ಬಂಧಿಸಿರುವಿ ವಿಠೋಬನ ಬೇಡುವೆ. ಎಂದೂ ನಿನ್ನ ಬಳಿ ವಿಠೋಬನಿರುವ. ಅರೆಕ್ಷಣ ವಿರಹವ ಸೈಸೆನಗಾಗಿ. ವಿಠೋಬನನಿತ್ತ ಕಳುಹಬಾರದೆ? ಸಖು ವಿಠೋಬನ ಕಾಣಲು ಮರುಗುತಿರುವಳು. ವಿಠೋಬನ ಒಮ್ಮೆ ಕಾಣಲು ಆತ್ಮವ ಅರ್ಪಣ ಗೈಯು ಬೇಕೆಂದಿರುವಳು.

ರಖುಮಾಯಿ, ಭಕ್ತಾಧೀನ ವಿಠೋಬ! ನಿನ್ನ ಸಮ್ಮತಿ ಇರದೆ ಇತ್ತ ಬರಲಾರನು. ದಯವ ನೀಡು, ರಖುಮಾಯಿ, ಕರುಣೆ ತೋರು. ಬರುವುದು ಸಖುವನುದ್ಧರಿಸಲು, ಅರ್ಪಣೆಯು ಸ್ವೀಕರಿಸಲು.

ವಿಠೋಬಾ, ಇನ್ನು ಬಾರೆಯಾ? ನಾನೇ ನಿನ್ನಲ್ಲಿಗೆ ಬರುವೆ. ನಿನಗೆ ಇಲ್ಲಿಗೆ ಬರುವ ಕಷ್ಟಬೇಡ; ನೀ ನನಗಾಗಿ ಏಕೆ ಬಳಲಬೇಕು? ಕಾಯಕಷ್ಟಕ್ಕೀಡಾಗಬೇಕು?

ವಿಠೋಬ, ವಿಠೋಬ, ವಿಠೋಬ, ಇದೆನ್ನ ಕೊನೆಯ ಅರ್ಪಣೆ; ಆತ್ಮಾರ್ಪಣೆ ನಿನ್ನ ಪಾದಾರವಿಂದದಲಿ.

(ಪ್ರಣಾಮ ಗೈದು ಕಾಯವ ತ್ಯಜಿಸುವಳು.)

ಮಾಲತಿ—ಸಖು, ಸಖು.

ವೃದ್ಧೆ—ಏಕಳುವೆ, ಮಾಲತಿ? ಸಖು ವಿಠೋಬನ ಸೇರಿದಳು.

ಮಾಲತಿ—ಅಕ್ಕಾ, ಸಖುವ ಬಿಟ್ಟೆಂತು ಇರಲಿ?

ವೃದ್ಧೆ—ಮಾಲತಿ, ನಮ್ಮ ಭಕ್ತಿ ಪರಿಪಕ್ವವಾಗಿಲ್ಲವಿನ್ನೂ. ಸಖು ನಮ್ಮನು ಮರೆಯಳು. ನಾವು ವಿಠೋಬನ ಸೇರುವದಿನ ಸಖು ನಮ್ಮ ಸ್ವಾಗತ ಮಾಡುವಳು. ಸಖು ಇಂದು ಸೇರಿದಳು. ನಮ್ಮ ದಿನ ಮಾತ್ರ ಮುಂದಿದೆ. ಅಂದಿನ ವರೆಗೆ ಸಖುವ ಮೈಮೆ ಜಗದಲಿ ಬೀರುವ. ಆಕೆಯ ಚರಿತೆಯ ಹಾಡುವ. ಸಖುವ ಭಕ್ತಿಯನು ಲೋಕದಲಿ ಕೊಂಡಾಡುವ. ಅಳದಿರು ಮಾಲತಿ. ಸಖು ರಖುಮಾಯಿ ವಿಠೋಬನ ಸೇರಿದಳು. ಅತ್ತು ಫಲವೇನು? ಸಖು ವಿಠೋಬ ಜೈ ಜೈ.

ಮಾಲತಿ—ಅಕ್ಕಾ, ಇಲ್ಲ. ಅಳುವ ನಿಲಿಸಿದೆ. ಭಕ್ತಾಗ್ರಣಿ ಸಖು ಜೈಜೈ.

ಸಂತರೆಲ್ಲರು—ವಿಠೋಬ ಜೈ ಜೈ. ಪಾಂಡುರಂಗ ಜೈ ಜೈ.

ಮಾಲತಿ, ವೃದ್ಧೆ—ರಖುಮಾಯಿ ವಿಠೋಬ ಜೈ ಜೈ. ಸಖು ವಿಠೋಬ ಜೈ ಜೈ.

ಸಂತರೆಲ್ಲರು—ರಖುಮಾಯಿ ವಿಠೋಬ ಜೈ ಜೈ. ಸಖು ವಿಠೋಬ ಜೈ ಜೈ.

ವೃದ್ಧೆ—ಸಾಧುಸಂತರೆ, ಸಖುವಿನ ಕಾಯಸಂಸ್ಕಾರಕೆ ನೆರವಾಗುವಿರಾ?

ಸಂತರು—ನೀವು ಕೇಳಬೇಕೆ? ಈ ಪವಿತ್ರ ಕಾರ್ಯ ಒದಗಿದ್ದು ನಮ್ಮ ಪುಣ್ಯ. ಕೈಹಿಂತೆಗೆವ ಪಾಪಿಗಳು ನಾವಲ್ಲವು.

(ಸಖುವ ಹೆಗಲಿಗೇರಿಸುವರು.)

ಸಂತಸಖು, ಭಕ್ತಾಗ್ರಣಿ ಸಖು ಜೈ ಜೈ.
ಶ್ರೀ ಪುರಂದರ ವಿಠೋಬ ಜೈ ಜೈ.

(ಪ್ರಸ್ಥಾನ)

ದೃಶ್ಯ ೫--ಪುನರುತ್ಥಾನ

(ಪ್ರದೇಶ—ಸುಡುಗಾಡು)

(ಪ್ರವೇಶ—ರುಖುಮಾಯಿ)

ರುಖುಮಾಯಿ—ಪತಿವಿರಹವ ತಾಳಲಾರೆ ವಿಠೋಬನು ಹಿಂತಿರುಗಿಲ್ಲ ವಿನ್ನು. ಭಕ್ತರ ಪ್ರೇಮದಾಸ ನನ್ನ ಪತಿವರ್‍ಯ ವಿಠೋಬ! ಸಖುವಿನ ದೀನ ಮರುಗು ವಿಠೋಬನ ಅತ್ತ ಸೆಳದೊಯ್ಯಿತು. ಹಗಲಿರುಳೆನ್ನದೆ ಪಂಡರಪುರದ ದರುಶನವ ಪಡೆವ ಆಸೆ ಸಖುಗೆ. ಮುಂಜಾನೆ ಆಕೆ 'ವಿಠೋಬ ವಿಠೋಬ' ಎಂಬ ಮೊರೆಗೆ ವಿಠೋಬನ ಹೃದಯ ಕರಗಿತು. ಸತಿಯ ಪ್ರೇಮಕೆ ಮಿಗುವ ಪ್ರೇಮ ಆ ಸಖುವಿನದು.

ಸಖುವಿನ ಬಂಧಿಸಿದರು ಇಲ್ಲಿಗೆ ಬರಬಾರದೆಂದು. ಆ ನಡು ಇರುಳು ವಿಠೋಬ ನನ್ನ ಬಳಿಯಿಂದ ಅದೃಶ್ಯನಾದ! ವಿಠೋಬನು ವೃದ್ಧೆಯ ರೂಪದಿ

ಸಖುವ ಬಿಡಿಸಿ ಇಲ್ಲಿಗೆ ಬರಲಾಜ್ಞೆಯನಿತ್ತ. ಈಗ ಎಲ್ಲಿರುವನೋ? ಪ್ರಾಣ ವಲ್ಲಭನೆತ್ತ ಹೋದನೊ? ಹುಡುಕಲು ದೂತನನಟ್ಟಿರುವೆ. ದೂತನಿನ್ನೂ ಬರಲಿಲ್ಲ.

ಸಖುವಿನ ವೇಷ ತೊಟ್ಟು ಅಲ್ಲಿರುವನೆ? ಸಖುವಿನ ವೇಷದಿ ಮನೆಕಜ್ಜ ಗೈಯುತಿರುವನೆ? ಹಾ ನನ್ನ ವಿಠೋಬ!

ವಿಠೋಬ. ಭಕ್ತಾಧೀನ ನೀ ವಿಠೋಬ. ಸತಿಯ ಪ್ರೇಮಾಧೀನ ನೀನಲ್ಲ. ರಖುಮಾಯಿ ವಿಠೋಬ ನೀನಲ್ಲ. ಭಕ್ತವಲ್ಲಭ ವಿಠೋಬ ನೀನಿರುವಿ. ಸಖುವಿಠೋಬ ನೀನಿರುವಿ.

ಸಖು, ನನ್ನ ಪತಿಯ ನೀ ವಶಮಾಡುವುದೆ? ಇದು ಹದಿಬದಿಯಗೆ ಉಚಿತವೆ? ನಿನ್ನ ಪತಿಯ ತ್ಯಜಿಸಿ ನನ್ನ ಪತಿ ವಿಠೋಬನಲಿ ಪ್ರೇಮವೆ? ಸಖು ಕಳುಹು ಇಲ್ಲಿಗೆ ನನ್ನ ಪತಿ ವಿಠೋಬನ. ಮಡುವಿನಲಿ ನರಳುತಿರುವೆ. ಕುರುಡಿಯಾಗಿ ಅಲೆಯುತಿರುವೆ! ಸಖು ಇದು ನಿನಗೆ ಧರ್ಮವಲ್ಲ; ಹದಿಬದಿ ಧರ್ಮಕೆ ಉಚಿತವಲ್ಲ.

(ಪ್ರವೇಶ—ದೂತ)

ದೂತ—ದೇವಿಯರೆ, ನನ್ನ ಪ್ರಣಾಮ.

ರುಖುಮಾಯಿ—ಆರ್ಯನು ಕಾಣಸಿಕ್ಕಿದನೆ? ಸಖು ಈಗೆಲ್ಲಿ?

ದೂತ—ದೇವಿಯರೆ, ನಿಮ್ಮ ಆರ್ಯನು ಸಖುವಿನ ವೇಷವ ತೊಟ್ಟು ಮನೆಕಜ್ಜವನೆಸಗುತಿರುವನು. ಮುಂಜಾನೆ ಮೊಸರ ಕಡೆವುದ ಕಂಡೆ. ಮಜ್ಜಿಗೆ ಅತ್ತ ಇತ್ತ ಹೊರಸೂಸಿತೆಂದು ಅತ್ತೆ ಹೊಡೆವುದ ಕಂಡೆ. ಕಡಗೋಲಿಂದ ಪೆಟ್ಟ ತಿನ್ನುವುದ ಕಂಡೆ. ಅತ್ತೆಯ ಬೈಗಳ ಕೇಳಿ ನನ್ನ ರೋಮಗಳು ನೆಟ್ಟಗಾದವು. ಆದರೇನ ಮಾಡಲಿದೆ? ಸಖುವನಲ್ಲಿಗೆ ಕಳುಹದೆ ಆರ್ಯ ವಿಠೋಬನಿತ್ತ ಬರುವಂತಿಲ್ಲ.

ರುಖುಮಾಯಿ—ಸಖು ಎಲ್ಲರುವಳು? ಸಖುವ ಬೇಡುವೆ ಆರ್ಯನ ಕಳುಹಲು.

ದೂತ—ದೇವಿಯರೆ! ಅದೆಂತಾಗುವುದು?

ರುಖುಮಾಯಿ—ಹೀಗೇತಕೆನ್ನುವಿ, ದೂತ?

ದೂತ—ಸಖು ಇಲ್ಲಿಗೆ ಬಂದ ಮರುದಿನವೆ, ಆ ಪೂಜ್ಯ ಏಕಾದಶಿ

ದಿನವೆ ಮಡಿದಳು. ತನ್ನಾತ್ಮನ ವಿಠೋಬಗೆ ಅರ್ಪಿಸಿದಳು. ಅವಳನ್ನು ಮರಳ್ವುದೆಂತು?

ರುಖುಮಾಯಿ—ಹಾ! ನನ್ನ ಪತಿದೇವನಲ್ಲಿ ಸಖುವಾಗಿಯೆ ಇರಬೇಕೆ? ಆರ್ಯ ವಿಠೋಬ, ನಿನ್ನ ನಾ ಸೇರುವಂತಿಲ್ಲವೆ ಇನ್ನು? ಹಾ ವಿಠೋಬ.

ದೂತ! ಈ ಸುಡುಗಾಡಿನಲಿ ಹುಡುಕು. ಸಖುವಿನ ದಹನ ಎಲ್ಲಾಗಿದೆಯೆಂದು ಅರಸು. ಸಖುವಿನ ಪುನರುತ್ಥಾನ ಮಾಡುವೆ. ಎಲುಬು ಬೂದಿಯ ಬೆರಸಿ ಸಖುಗೆ ಜನ್ಮವ ಕೊಡುವೆ. ಪ್ರಾಣದೇವನ ಇಲ್ಲಿಗೆ ಕಳುಹು ಎಂದು ಸಖುವ ಬೇಡುವೆ.

ದೂತ—ದೇವಿಯರೆ! ಇಲ್ಲಿಯೆ ಬಳಿಯಲಿರಬೇಕು. ಅಳುವ ಶಬ್ದ ಕೇಳುತಿದೆ.

ಸಖುವಿನ ಗೆಳತಿ ಮಾಲತಿಯ ಅಳುವದು! ಆಕೆ ಸಖುವಿನ ವಿರಹಕಾಗಿ ಈ ನಡುರಾತ್ರಿ ಮಸಣದಲಿ ಅಳುತಿರುವಳು.

ರುಖುಮಾಯಿ—ಇಲ್ಲಿಯೆ ಮರೆಯಾಗಿ ಎಲ್ಲವ ತಿಳಿವೆ.

ಮಾಲತಿ—ಸಖು! ಸಖು! **ಗೆಳತಿ** ಅಗಲಿದೆಯಾ? ನೀ ಧನ್ಯಳೆ! ವಿಠೋಬನಲಿ ಐಕ್ಯವ ಹೊಂದಿದಿ. ನನಗಾರ ದಿಕ್ಕಿಲ್ಲದೆ ತೆರಳ್ವುದೆ, ಸಖು? ನಿನ್ನೊಡನೆ ನನ್ನ ಪಿಠೋಬನು ಕರದೊಯ್ಯನು. ನಾನೆಂತು ಬಾಳಲಿ ನಿನ್ನನಗಲಿ? ಎಂತು ಆ ಸುಟ್ಟ ಊರನು ಸೇರುವುದು? ಇಲ್ಲಿಯೆ ನಿನಗಾಗಿ ಮರುಗುತ, ಕೊರಗುತ ಇರುವೆ. ನಿನ್ನ ಎಲುಬಿನೊಡನೆ ನನ್ನ ಎಲುಬನು ಸೇರಿಸುವೆ. ನೀ ವಿಠೋಬನಿಗಾಗಿ ಅತ್ತಿ. ನಾ ನಿನಗಾಗಿ. ನೀನೆ ನನಗೆ ವಿಠೋಬನಿರುವಿ. ನನ್ನ ಒಡಲು ನಿನಗಾಗಿ ಕೊರಗುತಿದೆ! ಒಂದು ಹನಿ ನೀರನೂ ಸ್ವೀಕರಿಸಲು ಕಾಯ ಒಡಂಬಡದಿದೆ. ಸಖು ನೀ ಬರಬಾರದೆ?

ಅಕ್ಕನು ವಿಠೋಬನ ಗುಡಿಯಲ್ಲಿರುವಳು; ಕದಲಲು ಒಪ್ಪಳು. ವಿಠೋಬಗೆ ನಾವೀರ್ವರು ತಿರಸ್ಕೃತರು. ನಿನಗೂ ತಿರಸ್ಕೃತರೆ?

ಮಾಲತಿಯು ಸಂತೈಸಲು ನಿನಗೆ ಮನಬಾರದೆ? ನೀನು ವಿಠೋಬನಿಗಾಗಿ ಆತ್ಮವ ಅರ್ಪಣೆಗೈದೆ. ಮಾಲತಿ ಸಖುಗಾಗಿ ಆತ್ಮವ ಅರ್ಪಣೆ ಗೈವಳೀಗ. ಆಗಲಾದರೂ ನಿನಗೆ ಮಾಲತಿಯ ಕಾಣಲು ಮನ ಬರಬಹುದು.

ಸಖು, ಇನ್ನು ನಿನ್ನ ಬಿಟ್ಟು ಬಾಳಲಾರೆ. ನನ್ನ ಬಾಳ ನಿನಗಾಗಿ ಕತ್ತರಿ

ಸುವೆ. ಈಗಲೇ ನಿನ್ನ ಸೇರುವೆ. ಬಳಿಯು ಕೊಳದಲಿ ಸ್ನಾನವನೆಸಗಿ ನಿನ್ನ ಬಳಿ ಸಾರದೆ ಬಿಡೆ; ನೀನೆಲ್ಲಿರುವೆನೆಂದು ಹುಡುಕದೆ ಬಿಡೆ!!

ನನ್ನ ಕಾಯು ನಿನ್ನ ಕಾಯದೊಡನೆ. ನನ್ನ ಎಲುಬು ನಿನ್ನ ಎಲುಬಿನೊಡನೆ. ನಿನ್ನ ಬೂದಿ ನನ್ನದರೊಡನೆ! ನನ್ನಾತ್ಮ ನಿನ್ನಾತ್ಮದೊಡನೆ. ಇನ್ನು ತಡವಿಲ್ಲ ಸಖು! ಮಾಲತಿಯು ಪ್ರೇಮ ನಿಬಡೆಯು ನೀ ಕಾಣುವೆ.

(ಪ್ರಸ್ಥಾನ)

ರುಖುಮಾಯಿ—ದೂತ! ಇದುವೆ ತಕ್ಕ ಸಮಯ. ಮಾಲತಿ ಹಿಂತಿರುಗುವ ಮೊದಲು ಈ ಕಜ್ಜವಾಗಬೇಕಿದೆ. ತಡಮಾಡದಿರು ದೂತ! ಎಲುಬು ಬೂದಿಯು ಬೆರಸು ಬೇಗನೆ. ಕೊಳದಿಂದ ತೀರ್ಥವ ತಾ.

ದೂತ—ಆಜ್ಞೆ........................ದೇವಿಯರೆ! ಸಿದ್ಧವಾಗಿವೆ. ಎಲ್ಲವು.

ರುಖುಮಾಯಿ—ಏಳು, ಎದ್ದೇಳು ಸಖು! ಸಂತ ಸಖು! ಭಕ್ತಾಗ್ರಣಿ ಸಖು! ಪತಿವಿರಹವ ತಾಳಲಾರೆ. ನೀ ಹೋಗಿ ನನ್ನ ಪ್ರಾಣಪ್ರಿಯನ ಕಳುಹು. ಎಲುಬು ಸೇರಿ, ಬೂದಿಯಲಿ ಕಲೆತು, ಸಖು, ನಿನಗೆ ಮೊದಲಿನ ಕಾಯ ದೊರೆಯಲಿ.

ಸಖು, ಸಖು, ನಿನ್ನ ಮನೆಗೆ ತವಕದಿ ತೆರಳು ನನಗಾಗಿ ತವಕದಿ! ನನ್ನ ಆರ್ಯ ನಿನಗಾಗಿ ಕಷ್ಟವ ಸೈಸುತಿರುವನು. ಕಳುಹು ನನ್ನ ಮುದ್ದು ವಿಠೋಬನ ಸಖು, ಏಳು! ಸಖು! ಚೇತನಗೊಳ್ಳು!!

ದೂತ! ಮಾಲತಿ ಇತ್ತ ಬರುತಿರುವಳು. ಸಖುಗೆ ಮೊದಲಿನ ಕಾಯ ಪ್ರಾಪ್ತವಾಗುತಿದೆ! ಚೇತನವ ಪಡೆವಳೀಗ! ತೆರಳುವುದು ನಾವಿನ್ನು.

(ಪ್ರಸ್ಥಾನ)

(ಪ್ರವೇಶ—ಮಾಲತಿ)

ಮಾಲತಿ—ಏನು! ಈ ರೂಪ ಸಖುವಿನ ತಾಣದಲಿ. ಆ ಹೊಳೆವ ರೂಪ,...ಸಖು ನಿನ್ನ ಹೋಲುವ ರೂಪ! ನೀನೆಯೊ? ಮಾಲತಿಯು ಕಾಣಲು ಬಂದೆಯಾ? ಇರದು; ಇದು ನನ್ನ ಭ್ರಮೆಯೊ?

ಸಖು—ಅದಾರು, ಮಾಲತಿಯೊ? ನೀನೆಂದು ಭಾಸವೆನಗೆ.

ಮಾಲತಿ—ಅದೇ ಸ್ವರ! ಅದೇ ರೂಪ! ಸಖು! ನಿಸ್ಸಿಯಾಗಿ ನನ್ನ ಸಖು!! ನೀನೆಂತು ಬಂದೆ ಸಖು?

ಸಖು—ಮಾಲತಿ! ರುಖುಮಾಯಿಯ ಆಜ್ಞೆಯಂತೆ ನಾ ಬಂದೆ. ಅವಳೆ ನಗೆ ಹೊಸ ಜನ್ಮವ ಕೊಟ್ಟಳು! ಈಗಲೇ ಊರ ಸೇರಬೇಕಾಗಿದೆ. ಎಲ್ಲವೂ ವಿಠೋಬನ ಮೈಮೆ! ಅವನ ಸಮ್ಮತಿ ಇರದೆ ಒಂದು ಕಡ್ಡಿಯೂ ಅಲ್ಲಾಡದು, ಮಾಲತಿ! ಅಕ್ಕ ಎಲ್ಲಿರುವಳು?

ಮಾಲತಿ—ವಿಠೋಬನ ಗುಡಿಯಲ್ಲಿ. ನಿನಗಾಗಿ ಕೊರಗುತಿರುವಳಲ್ಲಿ.

ಸಖು—ಅಕ್ಕನ ಕರತಾ ಮಾಲತಿ! ರುಖುಮಾಯಿಯ ಮಾತ ಮೀರು ವಂತಿಲ್ಲ. ತಡಮಾಡದಿರು, ಮಾಲತಿ.

ಮಾಲತಿ—ಸಖು! ನಿನ್ನಾಜ್ಞೆಯಂತೆ. ಈಗಲೆ ಕರತರುವೆ ಅಕ್ಕನನಿಲ್ಲಿಗೆ.

ದೃಶ್ಯ ೬--ಸಾಕ್ಷಾತ್ಕಾರ

(ಪ್ರವೇಶ—ಅತ್ತೆ, ಪತಿ.)

ಪತಿ—ಅಬ್ಬೆ, ಅಚ್ಚರವಿದು ನನಗೆ. ಕ್ಷಣವಾದರೂ ತಪ್ಪಿಲ್ಲವು ನಮ್ಮ ಕಣ್ಕಾವಲು. ಆದರೇನು ಅಬ್ಬೆ? ಮೊದಲಿನ ಸಖು ಇವಳಲ್ಲ. ಎಷ್ಟಕ್ಕೂ ಅಲ್ಲ. ಮೊಗದಲಿ ಉಜ್ವಲ ಕಾಂತಿ ಹೊರಹೊಮ್ಮುತಿದೆ. ಕಾಣದೆ ನಿನಗೆ? ಅದರ ಕಂಡೆನಗೆ ಎದೆ ಕಂಪಿಸುತಿದೆ. ಭೀತಿಯಿಂದ ಗಡಗುಡಿಸುತಿದೆ ನನ್ನೆದೆ. ನಗುವ ಮೊಗ. ನನಗೇನೋ ಭಯವಾಗುತಿದೆ. ದೈವವು ನಮ್ಮ ಮೇಲೆ ಮುನಿದಿದೆಂದು ಎನ್ನಿಸುತಿದೆ ನನಗೆ.

ಅತ್ತೆ—ಅಹುದು! ಮಗನೆ, ನೀನನ್ನುವುದೆಲ್ಲ! ಹೊಡೆಯಲೆತ್ತಿದ ಕೈ ಹಿಂಜರಿಯಿತು. ನಮ್ಮ ಕಾಠಿನ್ಯಕಾಗಿ 'ವಿಠೋಬ' ಧ್ಯಾನವ ಬಿಟ್ಟಳು. ಇದೇ ಅಚ್ಚರವೆನಗೆ ನನ್ನ ಎದೆ ಮರುಗುತಿದೆ ನಾ ಎಸಗಿದ ಪಾಪಕಾಗಿ. ಇರುಳಃ ನಿದ್ದೆ ಹತ್ತದು ಕಣ್ಣೆ. ಭೀಕರಾಕೃತಿಯೊಂದು ನನ್ನ ಮುಂದೆ ಹಗಲಿರುಳು ನಿಲ್ಲುತಿದೆ. ನಾ ಪಾಪಿ ಮಗನೆ!

ಪತಿ—ಅಬ್ಬೆ! ಸಖುವ ಗೋಳಾಡಿಸಿದೆ ನಿನ್ನ ಮಾತ ಕೇಳಿ! ತಾರೆಯು

ಮಾತಿನಲಿ ವಿಶ್ವಾಸವನ್ನಿಟ್ಟು ಪೀಡಿಸಿದೆ ನಾ ಬಗೆಬಗೆಯಲಿ! ಆದರೆ ಅಬ್ಬೆ ಇನ್ನು ನನ್ನಿಂದಾಗದದು! ಪಾಪಕ್ಕೆ ಮನವು ಒಪ್ಪದಿನ್ನು. ತಾರೆಯು ಕುಟಿಲ ಮನ ತಿಳಿಯಿತೆನಗೆ. ಜವ ಬಲೆಯು ಬೀಸಿದಳು ನನ್ನ ಮೇಲೆ. ಆದರೆ ವಿಠೋಬನು ರಕ್ಷಿಸಿದನೆನ್ನ. ಆ ಜಾರೆ ಇತ್ತ ಸುಳಿಯದಂತೆ ಎಚ್ಚರಿಸಿದೆ.

ಅತ್ತೆ—ಮಗನೇ! ಬೇಡುವೆ ಕ್ಷಮೆಯು! ಕೊಡವ ಒಡೆದಳೆಂದು, ನಾ ಹೊಡೆದೆ, ಜಾರೆ ಎಂದು ಬೈದೆ. ಆಗ ಸಖು "ಅತ್ತೆ! ಚಿಂತಿಸದಿರು. ನನ್ನಲಿ ಸತೀ ಧರ್ಮ ಇರೆ, ಕೊಡವಾಗಲಿ" ಎಂದಳು. ಅಚ್ಚರ ಮಗನೆ! ಚೂರು ಹೋಳುಗಳೆಲ್ಲ ಸೇರಿ ಕೊಡವಾಯಿತು, ಮಗನೆ!

ಪತಿ—ಅಬ್ಬೆ! ಸಖುವ ಕ್ಷಮೆ ಬೇಡದೆ ನನ್ನ ಮನಕೆ ನೆಮ್ಮದಿ ದೊರೆಯದು. ಸಖು ವಿಠೋಬನ ಒಲಿಸಿರುವಳು. ನಾವು ಪಾಪಿಯಾಗಿ ನರಳುತಿರುವೆವು. ಅವಳಿಂದ ನಮ್ಮ ಪಾಪ ತೊಳೆಯಬೇಕು.

(ಸಂತರ ಪ್ರವೇಶ)

೧ ಸಂತ—ಇದೇ ಮನೆ. ಇವರೆ ಇರಬೇಕು.

ಪತಿ—ಯಾರು ಇರಬೇಕು?

೧ ಸಂತ—ಸಖುವಿನ ಪತಿ ನೀನೆಯಾ?

ಪತಿ—ಅಹುದು, ಏತಕಾಗಿ ಕೇಳುತಿರುವಿರಿ?

೧ ಸಂತ—ಸತ್ಯವ ನಾವು ಹೇಳುವುದು. ನೀನು ಸತ್ಯದಿ ಸಖುವಿನ ಪತಿ ಇರುವೆಯಾ?

ಪತಿ—ಅಹುದು, ಆ ಪಾಪಿ ನಾನೆ.

೨ ಸಂತ—ಹಾಗೆ ಅನ್ನದಿರು, ಪುಣ್ಯಾತ್ಮ ನೀನಿರುವೆ.

೩ ಸಂತ—ಸಖು ವಿಠೋಬನ ಸೇರಿದಳು. ವರ ಪಾಂಡುರಂಗ ಜೈ ಜೈ. ಸಖು ವಿಠೋಬ ಜೈ ಜೈ.

ಪತಿ—ನನ್ನಿಯು ನುಡಿಯಲ್ಲದು ನಿಮ್ಮದು! ನಮ್ಮ ಸಖು ನಮ್ಮಲ್ಲಿಯೇ ಇರುವಳು. ಕೊಳಕೆ ಈಗ ಹೋಗಿರುವಳು.

೧ ಸಂತ—ಈ ಕರಗಳಿಂದಲೆ ಎಸಗಿದೆವು ಆಕೆಯ ದಹನ ಕ್ರಿಯೆಯಾ! ನಂಬೆಯಾ?

೨ ಸಂತ—ಸುಳ್ಳುಸಾರಿ ದೊರೆವುದೇನು ನಮಗೆ?

ಅತ್ತೆ—ಸಖು ಅರೆಗಳಿಗೆ ಮೊದಲು ಕೊಡವನೊಡೆದುದಕ್ಕೆ ನಾ ಶಿಕ್ಷಿಸಿರುವೆ.

ಸಂತ—ಅಮ್ಮಾ! ಅಂತಿರೆ ಸಖುವನಿತ್ತ ಕರೆಯಬಾರದೆ? ನಾವು ಗುರುತಿಸಬಲ್ಲೆವು. ಅವಳ ಕೈಯಲಿ ಆಭರಣಗಳಿರಲಿಲ್ಲವು.

ಪತಿ—ಮಾತಿನ ಕಾಳಗವೇಕೆ? ಅವಳೇ ಇತ್ತಬರುತಿರುವಳು. ಕೊಳದಿಂದ ನೀರ ತರುತಿರುವಳು. ಕಾಣುವಿರಿ ನೀನೆ.

(ಸಖು ದೂರದೊಳು ಕೊಡವನಿರಿಸುವಳು.)

೧ ಸಂತ—ಅಚ್ಚರ್ಯವಿದು!

೨ ಸಂತ—ಹಾ! ಸಖುವಿನ ಪ್ರೇತವಿದು!

೩ ಸಂತ—ಪ್ರೇತರೂಪದಿ ಸಖು. ನಿಜಕೂ ಪ್ರೇತ.

(ಬೆಚ್ಚಿ ಓಡುವರು)

ಪತಿ—ಇದೇನು? ಸಂತರು ಬೆಚ್ಚಿ ಓಡುವರು? ಸಂತರು ಸುಳ್ಳು ಸಾರುವರೆ?

ಅತ್ತೆ—ಸಖು! ಬಂದೇಕೆ ಬಂದೆ. ನಿನ್ನ ಆಭರಣವೆಲ್ಲಿ?

ಪತಿ—ಸಂತರ ಮಾತಿದು ನಿಜ. ಸಖು ನೀನಾರು? ಅಚ್ಚೆ ಇವಳೆನ್ನ ಸಖು. ಆದರೆ, ಕೊಳಕೆ ಹೋದ ಸಖು ಇವಳಲ್ಲ.

ಅತ್ತೆ—ಆಹುದು. ಮಗನೆ! ನಾವು ಕಟ್ಟು ಹಾಕಿದ ಸಖು ಇವಳೆ!

(ಮಾಲತಿ, ವೃದ್ಧೆ ಪ್ರವೇಶ)

ಮಾಲತಿ, ನೀನೆಂದು ಬಂದೆ? ಆರೊಡನೆ ಬಂದೆ?

ಮಾಲತಿ—ನಾವೀಗಲೆ ಬರುತಿರುವೆವು. ಸಖುವಿನೊಡನೆ, ಅಕ್ಕನೊಡನೆ ಈಗ ಬರುತಿರುವೆವು.

ಅತ್ತೆ—ಏನು? ಸಖು ನಿಮ್ಮೊಡನೆ ಬಂದಳೆ?

ಮಾಲತಿ—ಅಹುದು. ಕೊಳದ ಬಳಿ ಬರುವಾಗ ಬೇರೆ ಸಖುವ ಕಂಡೆವು ನಾವು. ಆ ಸಖು ನಮ್ಮ ಸಖುವಿನ ಪ್ರತಿರೂಪದವಳು. ಇವಳ ಕಂಡು ಅವಳು ಮಾಯವಾದಳಾಗ! ಅವಳು ತಂದ ಕೊಡದಲಿ ನಮ್ಮ ಸಖು ನೀರ ತಂದಳು. ಇದೇನಿರಬಹುದೆಂದು ಅರಿಯಲು ಇಲ್ಲಿಗೆ ಬಂದೆವು.

ಪತಿ—ಇದು ನಿಶ್ಚಯವೆ? ಸಂತರ ನುಡಿ ನಿಜವೆ? ಸಂತರ ನುಡಿ ಸತ್ಯವೆ? ವಿಠೋಬನ ಗುಡಿಯಲಿ ಸಖು ಮಡಿದಳಂತೆ? ಮಾಲತಿ, ಇದು ಸಹಜವೆ?

ಮಾಲತಿ—ಸಂತರು ಸುಳ್ಳಸಾರ್ವರೇ? ನನ್ನಿಯ ಸುದ್ದಿಯಿದು ಸಖು ಏಕಾದಶಿ ದಿನ ವಿಠೋಬಗೆ ಆತ್ಮವ ಅರ್ಪಿಸಿದಳು. ರುಖುಮಾಯಿ ಆಜ್ಞೆಯಂತೆ ಸಖು ಕಾಯವ ತೊಟ್ಟು ಬಂದಳು.

ವೃದ್ಧೆ—ಮಾಲತಿ, ಆ ಸಖುವೆ ವಿಠೋಬ. ಸಖುರೂಪದಿ ಇವರ ಸೇವೆಗೈಯುತಲಿದ್ದನಿಲ್ಲಿ. ರುಖುಮಾಯಿ ವಿಠೋಬನ ವಿರಹವ ತಾಳಲಾರದೆ ಸಖುಗೆ ಇನ್ನೊಮ್ಮೆ ಜನ್ಮವ ಕೊಟ್ಟಳು. ಇವರೆಂತು ವಿಠೋಬನ ಪೀಡಿಸುತಿದ್ದರೊ?

ಪತಿ—ಹಾ! ವಿಠೋಬ! ನಮ್ಮಂತೆ ಪಾಪಿಗಳು ಜಗದಿ ಅನ್ಯರಿಲ್ಲ. ವಿಠೋಬನ ಶಿಕ್ಷಿಸಿದ ನಮಗಾವ ನರಕವೊ?

ಸಖು, ನಾನು ಪಾಪಿ. ನಿನ್ನ ಕಾಡಿದ ಪಾಪಿ. ಕ್ಷಮಿಸೆನ್ನ ಅಪರಾಧವ.

ಅತ್ತೆ—ಸಖು, ಬೇಡುವೆ ನನ್ನ ಕ್ಷಮಿಸುವುದು. ವಿಠೋಬನಲಿ ಭಕ್ತಿಯ ಕಲಿಸು, ಸಖು!! (ಇಬ್ಬರೂ ಎರಗುವರು)

ಸಖು—ಪತಿವರ್ಯಾ, ಅತ್ತೆ! ಇಂತೆ ನೀವು ಮಾಡಲಾಗದು. ನೀವೆನಗೆ ಹಿರಿಯರು! ಪೂಜ್ಯರು! ಕಿರಿಯವಳು ನಾನಿರುವೆ! ನೀವೆನಗೆ ಎರಗ ಬಾರದೆಂದು ಬೇಡುವೆ. ವಿಠೋಬನು ನಿಮ್ಮ ಕಾಯುವನು.

ಪತಿ—ಸಖು! ವಿಠೋಬನ ತೋರಿಸೆಯಾ ಈ ಪಾಪಿಗೆ? ನಿನ್ನ ಕಾಳ್ಕಿಚ್ಚಿನಲಿ ಬೇಯಿಸಿ ಸುಟ್ಟ ಈ ಪಾಪಾಧಮಗೆ?

ಅತ್ತೆ—ಸಖು! ನನ್ನ ಹೃದಯ ಮರುಗುತಿದೆ! ಬೇಡುವೆ ನೀ ನನಗೆ ವಿಠೋಬನ ತೋರಿಸೆ!!

ಸಖು—ನಾವೆಲ್ಲರೂ ವಿಠೋಬನ ಸ್ತುತಿಸುವ! ವಿಠೋಬನು ಮೈದೋರದಿರನು!

ಮಾಲತಿ, ಅಕ್ಕಾ ವಿಠೋಬ ಜೈ ಜೈ.

ಮಾಲತಿ, ಎಲ್ಲರು—ವರಪಾಂಡುರಂಗ ಜೈ ಜೈ.

ಸಖು—ವಿಠೋಬ, ವಿಠೋಬ! ದಯದೋರು ಇವರಲ್ಲಿ. ನೀ ನನಗಾಗಿ ಇಷ್ಟು ದಿನ ಕಷ್ಟವ ಸೈಸಿದೆ. ಆರ್ಯಗೆ, ಅತ್ತೆಗೆ ನೀನೀಗಲೆ ಪ್ರಸನ್ನನಾಗ

ಬೇಕೆಂದು ಬೇಡುವೆ! ನಿನ್ನ ಸಾಕ್ಷಾತ್ಕಾರ ಅವರಿಗೀಗ ಆಗದಿರೆ ಸಖು ಬರುವಳು ನಿನ್ನ ಕರತರಲು! ವಿಠೋಬ, ವಿಠೋಬ! ನೀನಿರದ ಬಾಳೇಕೆನಗೆ?

(ವಿಠೋಬನ ಸಾಕ್ಷಾತ್ಕಾರ.)

ವಿಠೋಬ—ಸಖು! ನಿನ್ನ ಬಯಕೆಯ ಕರುಣಿಸಿರುವೆ. ನಿನ್ನಿಷ್ಟದಂತೆ ಅವರಿಗೆ ಮೈದೋರಿರುವೆ. ಸಖು! ಕೆಲಕಾಲ ಲೋಕದಲಿ ನೀನಿರಬೇಕು. ಭಕ್ತಪಂಥದ ಬಲ್ಮೆಯ ಲೋಕಕೆ ನೀ ತೋರುವೆ. ನೀ ಕರೆವಾಗ ನಾ ಬರುವೆ, ಸಖು.

ಸಖು—ದಯಾನಿಧಿ ವಿಠೋಬ! ಮಾಲತೀ, ಕಂಡೆಯಾ ಮುದ್ದು ವಿಠೋಬನ ಸಾಕ್ಷಾತ್ಕಾರವ. ದಿವ್ಯ ಜ್ಯೋತಿಮಯ ಪ್ರಸನ್ನ ರೂಪವ!

ಮಾಲತಿ—ರುಖುಮಾಯಿ ವಿಠೋಬ ಜೈ ಜೈ.

ಸಖು—ರಾಧಾಶ್ಯಾಮ ವಿಠೋಬ ಜೈ ಜೈ.

ಎಲ್ಲರೂ—ರುಖುಮಾಯಿ ವಿಠೋಬ ಜೈ ಜೈ.
ರಾಧಾಶ್ಯಾಮ ವಿಠೋಬ ಜೈ ಜೈ.

ಮಾಲತಿ—ಭಕ್ತಾಗ್ರಣಿ ಸಖು ವಿಠೋಬ ಜೈ ಜೈ.

ಎಲ್ಲರೂ—ಭಕ್ತಾಗ್ರಣಿ ಸಖು ವಿಠೋಬ ಜೈ ಜೈ.

ಮಾಲತಿ—ಪಾವನೆ ನೀ ಸಖು ಮೂಲೋಕದಲಿ. ಸಖು ಚರಿತೆಯ ಕೊಂಡಾಡಿದವಗೆ ಮುಕ್ತಿ! ಕೇಳಿದವಗೆ ಹೇಳಿದವಗೆ ಮುಕ್ತಿ! ಸತತಂ ಮಂಗಳವು, ವಿಠೋಬ, ನಿನಗೆ. ವಿಠೋಬ ಜೈ ಜೈ. ವರ ಪಾಂಡುರಂಗ ಜೈ ಜೈ.

ಪ್ರಕಾಶಕರು

ಬಿ. ಎನ್. ಸೋಮಯಾಜಿ ಕಂಪೆನಿ,

ರಥಬೀದಿ—ಮಂಗಳೂರು

PRINTED BY
S. U. PANIADY
AT
THULUNAD PRESS,
UDIPI